ಜಮೀನು ನಿವೇಶನ ಅಥವಾ ಮನೆಗಳ ನೋಂದಾವಣಿ ಮೌಲ್ಯ

2787 (3843)

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಮೀನು ನಿವೇಶನ ಅಥವಾ ಮನೆಗಳ ನೋಂದಾವಣೆ ಸಮಯದಲ್ಲಿ ರಾಜ್ಯ ಸರ್ಕಾರವು ನಿಗದಿಪಡಿಸಿರುವ ಆಸ್ತಿಯ ಮೌಲ್ಯವು ಹೆಚ್ಚಾಗಿರುವ ಬಗ್ಗೆ ಮರು ಪರಿಶೀಲನೆ ಮಾಡಲು ಸರ್ಕಾರವು ಒಂದು ಅಧ್ಯಯನ ಸಮಿತಿಯನ್ನು ನೇಮಕ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಆ ಸಮಿತಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಮಂತ್ರಿಗಳು)

ಅ) ಹೌದು

ಆ) ಸಮಿತಿಗಳು ವರದಿಯನ್ನು ಇನ್ನು ಸಲ್ಲಿಸಿರುವುದಿಲ್ಲ.

ಇ) ಶೀಘ್ರವಾಗಿ ವರದಿ ಸಲ್ಲಿಸಲು ಸಮಿತಿಗಳಿಗೆ ಸೂಚಿಸಿದೆ.

ರಾಜ್ಯದಲ್ಲಿ ಆಶ್ರಯ ಯೋಜನೆಯ ಸಾಧನೆ.

2788: (3846)

ಶ್ರೀ ವಿ.ಮುನಿಯಪ್ಪ (ಶಿಡ್ಲಘಟ್ಟ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1996-97, 1997-98 ಮತ್ತು 1998-99ನೇ ಸಾಲುಗಳ ಆಶ್ರಯ ಯೋಜನೆಯಲ್ಲಿ ರಾಜ್ಯದ ಗುರಿ ಹಾಗೂ ಭೌತಿಕ ಸಾಧನೆಯೇನು?

ಆ) ಈ ಮೇಲ್ಕಂಡ 3 ವರ್ಷಗಳಲ್ಲೂ ಗುರಿ ಸಾಧಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ವರ್ಷ	ಭೌತಿಕ ಗುರಿ	ಸಾಧನೆ	
96-97	131735	43423	
97-98	117603	33046	
98-99	124232	18497★	ಸೆಪ್ಟೆಂಬರ್ ಅಂತ್ಯದವರೆಗೆ

★ಹಿಂದಿನ ವರ್ಷಗಳಲ್ಲಿ ಬಾಕಿ ಉಳಿದ ಗುರಿ ಹೊಸ ವರ್ಷದ ಗುರಿಯೊಂದಿಗೆ ಸೇರಿರುತ್ತದೆ.

ಆ) ಮೇಲ್ಕಂಡ 3 ವರ್ಷಗಳಲ್ಲಿ ಪೂರ್ಣ ಗುರಿಯನ್ನು ಸಾಧಿಸಲಾಗಿಲ್ಲ.

ಇ) 1) ಹುಡ್ಕೋ ಸಂಸ್ಥೆಯಿಂದ ಪೂರ್ಣ ಸಾಲದ ಮಂಜೂರಾತಿಯಲ್ಲಿ ವಿಳಂಬವಾಗಿರುವುದು.

2) 1997-98ನೇ ಸಾಲಿನಲ್ಲಿ ಹೊಸದಾಗಿ ರಚಿಸಲಾದ ವಸತಿ ಸಮಿತಿಗಳು, ಫಲಾನುಭವಿಗಳನ್ನು ಆಯ್ಕೆ ಮಾಡುವುದರಲ್ಲಿ ವಿಳಂಬವಾಗಿರುವುದು.

3) 1998-99ನೇ ಸಾಲಿನಲ್ಲಿ ಅತಿವೃಷ್ಟಿಯಾಗಿರುವುದರಿಂದ.

ತಿಪಟೂರು ಕೃಷಿ ಮಾರುಕಟ್ಟೆ ಸಮಿತಿಯ ಅಭಿವೃದ್ಧಿ ಹಣ ಬಿಡುಗಡೆ.

2790: (3825)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ತಿಪಟೂರು ತಾಲ್ಲೂಕು ಕೃಷಿ ಮಾರುಕಟ್ಟೆ ಸಮಿತಿಯಿಂದ ಪ್ರತಿ ವರ್ಷ 15.00 ಲಕ್ಷ ರೂಪಾಯಿಗಳನ್ನು ಗ್ರಾಮಾಂತರ ಪ್ರದೇಶದ ರಸ್ತೆಗಳ ಅಭಿವೃದ್ಧಿಗೋಸ್ಕರ ಸರ್ಕಾರದಿಂದ ಮಂಜೂರಾತಿ ನೀಡಿದ್ದು ಅದರಲ್ಲಿ ಎರಡು ವರ್ಷದ ಅಭಿವೃದ್ಧಿ ಹಣ ಬಿಡುಗಡೆ ಮಾಡಿದ್ದು ಉಳಿದ ಹಣವನ್ನು ಬಿಡುಗಡೆ ಮಾಡದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು.

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಬಂದಿದೆ

ಆ) 1995-96 ಮತ್ತು 96-97ನೇ ಸಾಲಿನಲ್ಲಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡಲಾಗಿದೆ. ನಂತರದ ಸಾಲಿನಲ್ಲಿ ಗ್ರಾಮೀಣ ಸಂಪರ್ಕ ರಸ್ತೆ ಕಾಮಗಾರಿಗಳ ಅಭಿವೃದ್ಧಿ ಬಗ್ಗೆ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ. 1997-98ನೇ ಸಾಲಿನ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಅಭಿವೃದ್ಧಿಪಡಿಸುವುದೇ ಅಥವಾ ಈ ರಸ್ತೆಗಳನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಪುನಃ ವರ್ಗಾಯಿಸುವುದೇ ಎಂಬ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ತೀರ್ಮಾನ ತೆಗೆದುಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ತಿಪಟೂರು ಗ್ರಾಮಾಂತರ ಪ್ರದೇಶದಲ್ಲಿ ಭಾರಿ ಮಳೆಯಿಂದ ಹಾನಿಗೊಳಗಾದವರಿಗೆ ಪರಿಹಾರ ಕ್ರಮಗಳು.

2791: (3826)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಿಪಟೂರು ಗ್ರಾಮಾಂತರ ಪ್ರದೇಶದಲ್ಲಿ ಮಳೆಯ ಅತಿವೃಷ್ಟಿಯಿಂದ ಎಷ್ಟು ಮನೆಗಳು ಕುಸಿದಿದೆ, ಇದರಿಂದ ಮೃತಪಟ್ಟ ಜನರ, ಜಾನುವಾರುಗಳ ಸಂಖ್ಯೆ ಎಷ್ಟು?

ಆ) ಆ ಬಗ್ಗೆ ಇಲ್ಲಿಯವರೆಗೂ ಸರ್ಕಾರದಿಂದ ಕೈಗೊಂಡ ಪರಿಹಾರ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಇತ್ತೀಚಿನ ಭಾರೀ ಮಳೆಯಿಂದ ತಿಪಟೂರು ಗ್ರಾಮಾಂತರ ಪ್ರದೇಶದಲ್ಲಿ 116 ಮನೆಗಳು ಭಾಗಶಃ ಹಾನಿಗೊಳಗಾಗಿದ್ದು, ಒಂದು ಹಸು, ಮಾತ್ರ ಸತ್ತಿರುತ್ತದೆ. ಆದರೆ ಯಾವುದೇ ಮಾನವ ಜೀವ ಹಾನಿಯಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ.

ಆ) ಮನೆ ಕುಸಿತದಿಂದ ಸಂತ್ರಸ್ಥರಾದ ಜನರಲ್ಲಿ ಒಟ್ಟು 91 ಜನರಿಗೆ ರೂ. 90,400-00ಗಳ ಪರಿಹಾರವನ್ನು ನೀಡಲಾಗಿದ್ದು, ಉಳಿದ 25 ಜನ ಸಂತ್ರಸ್ಥರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.